International Journal of Kannada Research 2017; 3(4): 168-169

International Journal of Kannada Research
www.kannadajournal.com

**ISSN: 2454–5813**
IJKR 2017; 3(4): 168-169
© 2017 IJKR
www.kannadajournal.com
Received: 29-08-2017
Accepted: 30-09-2017

**ಪ್ರಕಾಶ.ಮ.ಶಿವಾಪೂರ**
ಸಂಶೋಧನಾ ವಿದ್ಯಾರ್ಥಿ,
ಶಾಸ್ತ್ರೀಯ ಕನ್ನಡ ಭಾಷಾ ಅದ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

**ಡಾ. ಗುಂಡಣ್ಣ.ಚ.ಕಲಬುರ್ಗಿ**
ಮಾರ್ಗದರ್ಶಕರು, ಶಾಸ್ತ್ರೀಯ ಕನ್ನಡ ಭಾಷಾ ಅದ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

**Correspondence**
**ಪ್ರಕಾಶ.ಮ.ಶಿವಾಪೂರ**
ಸಂಶೋಧನಾ ವಿದ್ಯಾರ್ಥಿ,
ಶಾಸ್ತ್ರೀಯ ಕನ್ನಡ ಭಾಷಾ ಅದ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
ಮೊಬೈಲ್

# ಜಾತಿ ಪದ್ಧತಿ

**ಪ್ರಕಾಶ.ಮ.ಶಿವಾಪೂರ, ಡಾ. ಗುಂಡಣ್ಣ.ಚ.ಕಲಬುರ್ಗಿ**

"ಜನ್ಮನಾ ಜಾಯತೇ ಶೂದ್ರಃ ಸಂಸ್ಕಾರಾತ್ ದ್ವಿಜ ಉಚ್ಚತೇ"
ಹುಟ್ಟುವಾಗ ಎಲ್ಲರೂ ಶೂದ್ರರಾಗಿಯೇ ಹುಟ್ಟುತ್ತಾರೆ. ನಂತರದ ಜೀವನದಲ್ಲಿ ಸಂಸ್ಕಾರ ಹೊಂದಿದವರು ದ್ವಿಜರಾಗಿರುತ್ತಾರೆ. ಸಂಸ್ಕೃತ ಭಾಷೆಯಲ್ಲಿನ ಈ ಉಕ್ತಿಯಿಂದ ನಮಗೆ ಸ್ಪಷ್ಟವಾಗುವದೆನೆಂದರೆ ಹುಟ್ಟಿನಿಂದ ಎಲ್ಲರೂ ಸರಿಸಮಾನವಾಗಿಯೇ ಇರುತ್ತಾರೆ ನಂತರ ಗುಣ ಮತ್ತು ವೃತ್ತಿಗಳಿಗೆ ಅನುಗುಣವಾಗಿ ವಿವಿಧ ವರ್ಗಗಳಾಗುತ್ತವೆ ಎಂಬುದನ್ನು ನಾವು ಸಹಜವಾಗಿಯೇ ಮನವರಿಕೆ ಮಾಡಿಕೊಳ್ಳಬಹುದು.

ಆದರೆ, ಇಂದಿನ ದಿನಮಾನದಲ್ಲಿ ಇದೇ ಜಾತಿಯು ರೆಂಬೆ – ಕೊಂಬೆಯೊಂದಿಗೆ ಹೆಮ್ಮರವಾಗಿ ಬೆಳೆದು ನಿಂತಿದೆ. ಸುಂದರವಾದ ಸಮಾಜದಲ್ಲಿ ಯಾವುದೇ ರೀತಿಯ ಓರೇ–ಕೋರೆಗಳಿಲ್ಲದೇ ಜಾತಿಯನ್ನು ಜನರು ತಮ್ಮ ಸ್ವಾರ್ಥಕ್ಕೋಸ್ಕರವಾಗಿ ಬಳಸಿಕೊಳ್ಳುತ್ತಿರುವದು ಸ್ವಾಭಾವಿಕವಾದ ಸಂಗತಿಯಾಗಿದೆ. ಆದ್ದರಿಂದ ಸಮಾಜದ ಅಥವಾ ಇಡೀ ದೇಶದ ಅಭಿವೃದ್ದಿಗೆ ಮಾರಕವಾಗಿ ನಿಂತಿದೆ.

ಒಂದು ಕ್ಷಣ ಸ್ವಾರ್ಥವನ್ನು ಬಿಟ್ಟು ಪ್ರಾಮಾಣಿಕಾವಾಗಿ ಸಮಾಜದ ಒಳಿತಿಗಾಗಿ ಯೋಚಿಸಿದಾಗ ನಮ್ಮೆಲ್ಲರಿಗೂ "ಜಾತಿ ವ್ಯವಸ್ಥೆ"ಯು ಬೇಕೆ? ಎಂಬುದುನ್ನು ಅಲೋಕಿಸಬೇಕಾಗಿದೆ. ಏಕೆಂದರೆ ಒಂದೇ ಸಮಾಜದಲ್ಲಿ ಹಲವು ಕೋಮುಗಳಾಗಿ ವಿಂಗಡಿಸುವದರಿಂದ ಅಲ್ಲಿ ಅಭಿವೃದ್ದಿಗೆ ತೊಂದರೆಯಾಗುವದಲ್ಲದೇ ಸಾಮರಸ್ಯದ ಕೊರತೆಯಿಂದಾಗಿ ಸಮಾಜದ ಸ್ವಾಸ್ಥ್ಯ ಹಾಳಾಗುವದರಲ್ಲಿ ಯಾವುದೇ ಸಂಶಯವಿಲ್ಲ.

ಇನ್ನು ಭಾರತ ಹಲವಾರು ಜಾತಿ,ಧರ್ಮ,ಭಾಷೆಗಳನ್ನು ಹೊಂದಿದ ದೇಶ. ಒಟ್ಟಾರೆಯಾಗಿ ವಿವಿಧತೆಯಲ್ಲಿ ಏಕತೆಯನ್ನು ಕಾಣಬೇಕಾದ ನಾವು ಜಾತಿ ಮತ್ತು ಧರ್ಮಗಳ ಸಂಕುಚಿತ ಭಾವನೆಯಿಂದ ಹೊರಗೆ ಬರಲಿಲ್ಲ. ನಮ್ಮನ್ನಾಳುವವರು ಹೊರಬರಲು ಬಿಡಲಿಲ್ಲ. ಭಾಷೆಗೊಬ್ಬ ಮುಖಂಡ,ಜಾತಿಗೊಬ್ಬ ನಾಯಕ,ಅವರಿಗೊಂದು ಪಕ್ಷ ಇಂತಹ ಒಡೆದು ಆಳುವ ನೀತಿ ಹಾಗೂ ಅದರಲ್ಲಿಯೇ ಸ್ವ ಹಿತಾಸಕ್ತಿಯನ್ನು ಬಯಸಿದರೆ ಹೊರತು,ರಾಷ್ಟ್ರೀಯ ಹಿತಾಸಕ್ತಿಯ ಮೌಲ್ಯಗಳು ಅವರ ತಲೆಗೆ ಹೊಳೆಯಲಿಲ. ನಮ್ಮ ರಾಜಕೀಯ ಪಕ್ಷಗಳು ಸಾಮಾಜಿಕ,ಆರ್ಥಿಕ,ಸಾಂಸ್ಕೃತಿಕ ಅಭಿವೃದ್ದಿಯನ್ನು ಇಟ್ಟುಕೊಂಡು ಚುನಾವಣೆ ಎದುರಿಸುವದನ್ನು ಬಿಟ್ಟು ಯಾವ ಕ್ಷೇತ್ರದಲ್ಲಿ ಯಾರ ಪ್ರಭಾವವಿದೆ, ಯಾವ ಜಾತಿಯ ಮತಗಳು ನಿರ್ಣಾಯಕ,ಅವರ ಒಲೈಕೆಗೆ ಏನು ಮಾಡಬೇಕು? ಎಂಬ ಲೆಕ್ಕಾಚಾರ ಹಾಕಿ ನಂಬರ್‌ಗೇಮ್ ರಾಜಕಾರಣ ಮಾಡುತ್ತಿವೆಯೇ ಹೊರತು ಅಭಿವೃದ್ಧಿ ಆಧಾರರಿತ ರಾಜಕಾರಣ ಮಾಡಲಿಲ್ಲಿ. ಇದರಿಂದಾಗಿ ಸೂಕ್ಷ್ಮ ವಿಷಯಗಳಿಗೆ ರಾಜಕೀಯ ಬಣ್ಣ ಲೇಪಿಸಿ,ಧರ್ಮಾಂಧತೆ,ಕೋಮುಗಲಭೆ,ಮತೀಯ ಆಧಾರದ ಭಯೋತ್ಪಾದನೆ ಮುಂತಾದ ರಕ್ತಬೀಜಾಸುರರಂತಹ ಸಮಸ್ಯೆಗಳು ಸಮಾಜವನ್ನು ಹೆಗ್ಗಣದಂತೆ ಕೊರೆಯಲು ಮುನ್ನುಡಿ ಬರೆದಂತಾಗಿದೆ.

ಅನಾದಿಕಾಲದಿಂದಲೂ ನಮ್ಮ ನಡುವೆ ಹೆಮ್ಮರವಾಗಿ ಬೆಳೆದ ಜಾತಿ ಎಂಬ ಅಗೋಚರ ಶಕ್ತಿ ಮನುಷ್ಯನಲ್ಲಿ ಮತ್ತು ಅವನ ಬದುಕಿನಲ್ಲಿ ಸಂಸ್ಕಾರ,ನೈತಿಕತೆ,ಸತ್ಸಂಗ ಇನ್ನಿತರ ಮೌಲ್ಯಗಳನ್ನು ಬೆಳೆಸಬೇಕಾಗಿತ್ತು,ಆದರೆ ದುರಾದರುಷ್ಟವಶಾತ್ ಸಾಮಾಜಿಕ ವ್ಯವಸ್ಥೆಯಲ್ಲಿ ಸಹೋದರತ್ವ ಬೆಳೆಯಬೇಕಾದ ನಮ್ಮ ನಡುವೆ ದ್ವೇಷ,ಅಸೂಯೆ,ವೈಷಮ್ಯ,ವೈಮನಸ್ಸುಗಳನ್ನು ಸೃಷ್ಟಿಸುತ್ತಿದೆ.

ಸದಾ ನಮ್ಮ ಪೂರ್ವಿಕರನ್ನು,ಸಾಮಾಜಿಕ ನೇತಾರರನ್ನು,ಸಂತರನ್ನು,ಗೌರವಿಸುವ ನಾವುಗಳು ವರ ಬಿಟ್ಟುಹೋದ ಸಾಮಾಜಿಕ ಮೌಲ್ಯಗಳನ್ನು ಗೌರವಿಸಲಿಲ್ಲ. "ಕುಲ–ಕುಲವೆಂದು ಹೊಡೆದಾಡದಿರಯ್ಯ" ಎಂದ ಕನಕದಾಸರಾಗಲಿ, "ಹರಿಜನರಲ್ಲಿಯೇ ನಾನು ಹರಿಯನ್ನು ಕಾಣುತ್ತೇನೆ" ಎಂದ ಗಾಂಧೀಜಿಯಾಗಲಿ, 12ನೇ ಶತಮಾನದಲ್ಲಿ ಜಾತಿಪದ್ದತಿಯನ್ನು ಹೋಗಲಾಡಿಸಲು ಟೊಂಕಕಟ್ಟಿ ನಿಂತ

ಜಗಜ್ಯೋತಿ ಬಸವೇಶ್ವರರಾಗಲಿ,ಅಸ್ಪ್ರೃಶ್ಯತೆಯ ಕರಿನೆರಳಲ್ಲಿಯೇ ಮೂಡಣದ ಸೂರ್ಯನಂತೆ ಮುಡಿಬಂದ ಅಂಬೇಡ್ಕರರಾಗಲಿ,ಯಾವತ್ತೂ ವಾಸ್ತವಿಕ ಜೀವನದಲ್ಲಿ ನಮ್ಮ ಚಿತ್ತದಲ್ಲಿ ಬರಲಿಲ್ಲ.

ಇನ್ನು ಜಾತಿಯ ವಿಚಾರವಾಗಿ ಜಾಗತಿಕವಾಗಿ ಅವಲೋಕಿಸಿದಾಗ ಜಗತ್ತಿನ ಅತಿಹೆಚ್ಚು ಜನಸಂಖ್ಯೆಯನ್ನು ಹಾಗೂ ಅತ್ಯಂತ ಹೆಚ್ಚು ಸುಶಿಕ್ಷಿತರನ್ನು ಹೊಂದಿದ ಕ್ರೈಸ್ತ ಧರ್ಮವು ಕ್ಯಾಥೋಲಿಕ್ ಮತ್ತು ಪ್ರೋಟೆಸ್ಟೆಂಟ್‌ರೆಂಬ ತಾರತಮ್ಯದಿಂದ ಬಡೆದಾಡಿಕೊಳ್ಳುತ್ತಿದೆ. ಮತ್ತೊಂದು ಧರ್ಮ ಇಸ್ಲಾಂ ಭಯೋತ್ಪಾದನೆಯ ಬೇಗೆಯಲ್ಲಿ ನಿತ್ಯ ನರಕಯಾತನೆ ಅನುಭವಿಸುತ್ತಿದೆ. ಇನ್ನು ಅತ್ಯಂತ ಸನಾತನ ನಮ್ಮ ಹಿಂದೂ ಧರ್ಮ ತನ್ನಲ್ಲಿಯೇ ಹುಟ್ಟಿಕೊಂಡ ಜಾತಿ ಒಳಪಂಗಡಗಳ ಸುಳಿಗೆ ಸಿಕ್ಕು ನರಳುತ್ತಿದೆ.

ಪ್ರಸ್ತುತ ಭಾರತೀಯರಾದ ನಮಗೆ ಜಾತಿಯತೆ ಎಂಬ ಸಂಕುಚಿತ ಭಾವನೆಯಿಂದ ಹೊರಬರಲು ಇರುವ ಏಕೈಕ ಮಾರ್ಗವೆಂದರೆ *ಭಾರತವನ್ನೇ ಒಂದು ಧರ್ಮವೆಂದು ಭಾವಿಸಿ, ತಾಯಿ ಭಾರತಾಂಬೆಯನ್ನು ದೇವರಂತೆ ಪೂಜಿಸಿ,ಸಂವಿಧಾನವನ್ನು ಧರ್ಮಗ್ರಂಥವೆಂದು ಸ್ವೀಕರಿಸುವದು.* ಇದಿಷ್ಟು ನಮ್ಮಿಂದ ಮಾಡಲು ಸಾಧ್ಯವೇ? ಸಾಧ್ಯವಾದರೆ ಮತ್ತೆ ಜಗದ್ಗುರುವಾಗಿಬಿಡುತ್ತದೆ. ಏಕೆಂದರೆ 21ನೇ ಶತಮಾನದ ಅಧಿಪತಿಯಾಗುವ ತಾಕತ್ತು ನಮಗಿದೆ.ಎಷ್ಟೇ ಆಗಲಿ ನಮ್ಮದು “ಒಂದು ಭಾರತ ಶ್ರೇಷ್ಠ ಭಾರತ” ಅಲ್ಲವೇ?

“ಏನೇ ಆಗಲಿ,ತಾಯಿ ಭಾರತಾಂಬೆಗೆ ಜಯವಾಗಲಿ”